ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2026-27 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಆಯುಷ್ ಖಾಸಗಿ ಅನುದಾನ ರಹಿತ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ / ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಕೋಟಾ ಸೀಟುಗಳಿಗೆ ಶುಲ್ಕ ನಿಗದಿಪಡಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ ಆಕುಕ 345 ಪಿಐಎಂ 2025, ದಿನಾಂಕ 02.08.2025 ಮತ್ತು ಸೇರ್ಪಡೆ ಆದೇಶ ದಿನಾಂಕ 09.09.2025.

2. ಸರ್ಕಾರದ ಆದೇಶ ಸಂಖ್ಯೆ 267 ಪಿಐಎಂ 2025, ದಿನಾಂಕ 07.03.2026.

3. ಆಯುಕ್ತರು, ಆಯುಷ್ ಇಲಾಖೆ ಇವರ ಪತ್ರ ಸಂಖ್ಯೆ AYUSH/33/DEV2/2026, ದಿನಾಂಕ 04.04.2026.

4. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯ ಸಭೆಯ ನಡವಳಿಗಳ ದಿನಾಂಕ 23.09.2026.

****

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶ ಮತ್ತು ಸೇರ್ಪಡೆ ಆದೇಶದಲ್ಲಿ, ಆಯುರ್ವೇದ, ಹೋಮಿಯೋಪತಿ, ಯುನಾನಿ ಹಾಗೂ ಯೋಗ ಮತ್ತು ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿನ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ 2024-25 ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿದ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕವನ್ನು 2025-26ನೇ ಸಾಲಿಗೆ ಯಥಾವತ್ತಾಗಿ ಮುಂದುವರೆಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸಂ. (2)ರ ಸರ್ಕಾರದ ಆದೇಶದಲ್ಲಿ, ಸರ್ಕಾರಿ ಆಯುಷ್ ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯಗಳಲ್ಲಿನ ವಾರ್ಷಿಕ ಶುಲ್ಕವನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (3)ರ ಪತ್ರದಲ್ಲಿ ಆಯುಕ್ತರು, ಆಯುಷ್ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯಲ್ಲಿ, 2025-26ನೇ ಸಾಲಿಗೆ ಆಯುರ್ವೇದ, ಹೋಮಿಯೋಪತಿ, ಯುನಾನಿ ಹಾಗೂ ಯೋಗ ಮತ್ತು ಮತ್ತು ಪ್ರಕೃತಿ ಚಿಕಿತ್ಸೆ ಪದ್ಧತಿಯಲ್ಲಿನ ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ನಿಗದಿಪಡಿಸಿದ ಸೀಟು ಹಂಚಿಕೆಯ ಅನುಪಾತ ಮತ್ತು ಶುಲ್ಕವನ್ನು ಒಳಗೊಂಡಂತೆ ಸರ್ಕಾರಿ ಮಹಾವಿದ್ಯಾಲಯಗಳಿಗೆ ಈಗಾಗಲೇ ನಿಗದಿಪಡಿಸಿರುವ ಶುಲ್ಕವನ್ನು ಸೇರಿಸಿ 2026-27 ನೇ ಸಾಲಿಗೆ ನಿಗದಿಪಡಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ. (4)ರ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ, 2026-27 ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಆಯುಷ್ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳ ಆಯುರ್ವೇದ ಮತ್ತು ಯುನಾನಿ ಹಾಗೂ ಇನ್ನಿತರ ಪದವಿ / ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಕೋಟಾ ಸೀಟುಗಳಿಗೆ ಶುಲ್ಕ ನಿಗದಿಪಡಿಸಿ Consensual agreement ಮಾಡಿಕೊಳ್ಳುವ ಕುರಿತು ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ಅಸೋಸಿಯೇಷನ್ ನ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ, 2025-26 ನೇ ಸಾಲಿಗೆ ಖಾಸಗಿ ಅನುದಾನ ರಹಿತ ಪದವಿ ಮತ್ತು ಸ್ನಾತಕೋತ್ತರ ಆಯುರ್ವೇದ / ಯುನಾನಿ / ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ನಿಗದಿ

...2

-ಪಡಿಸಲಾಗಿರುವ ಶುಲ್ಕದಲ್ಲಿ ಭಾರತ ಸರ್ಕಾರದ ಸೀಟುಗಳಿಗೆ ಅನ್ವಯಿಸುವಂತೆ ₹50,000/- ಗಳನ್ನು 2026-27 ನೇ ಸಾಲಿಗೆ ಮಾತ್ರ ಒಂದು ಬಾರಿಯಾಗಿ ಹೆಚ್ಚಿಸಲು ಸಭೆಯ ನಡವಳಿಗಳಲ್ಲಿ ತೀರ್ಮಾನಿಸಲಾಗಿರುತ್ತದೆ. ಅಲ್ಲದೇ, ಭಾರತ ಸರ್ಕಾರದ ಸೀಟುಗಳಿಗೆ ಅನ್ವಯಿಸುವಂತೆ ₹50,000/- ಗಳನ್ನು 2026-27 ನೇ ಸಾಲಿಗೆ ಮಾತ್ರ ಒಂದು ಬಾರಿಯಾಗಿ ಹೆಚ್ಚಿಸಿರುವುದನ್ನು ಸೇರ್ಪಡೆಗೊಳಿಸಿ, 2025-26 ನೇ ಸಾಲಿಗೆ ನಿಗದಿಪಡಿಸಲಾಗಿದ್ದ ಶುಲ್ಕವನ್ನು 2026-27 ನೇ ಸಾಲಿಗೆ ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಆಯುಕ್ತರು, ಆಯುಷ್ ಇಲಾಖೆ ಇವರ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 288 ಪಿಐಎಂ 2026, ಬೆಂಗಳೂರು, ದಿನಾಂಕ 29.09.2026.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2025-26 ನೇ ಸಾಲಿಗೆ ಖಾಸಗಿ ಅನುದಾನರಹಿತ ಪದವಿ ಮತ್ತು ಸ್ನಾತಕೋತ್ತರ ಆಯುರ್ವೇದ / ಯುನಾನಿ / ಹೋಮಿಯೋಪತಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಕಾಶ ಕಲ್ಪಿಸಲು ನಿಗದಿಪಡಿಸಲಾಗಿರುವ ಶುಲ್ಕಗಳ ಪೈಕಿ ಭಾರತ ಸರ್ಕಾರದ ಸೀಟುಗಳಿಗೆ ಮಾತ್ರ ಅನ್ವಯಿಸುವಂತೆ ₹50,000/- ಗಳನ್ನು 2026-27 ನೇ ಸಾಲಿಗೆ ಮಾತ್ರ ಒಂದು ಬಾರಿಯಾಗಿ ಹೆಚ್ಚಿಸಿ ಮತ್ತು ಈ ಶುಲ್ಕವನ್ನು ಹೆಚ್ಚಿಸಿರುವುದನ್ನು ಹೊರತುಪಡಿಸಿ, ಇನ್ನುಳಿದ ವರ್ಗಗಳ ವಾರ್ಷಿಕ ಶುಲ್ಕಗಳಲ್ಲಿ ಯಾವುದೇ ಬದಲಾವಣೆ ಇಲ್ಲದೇ 2026-27 ನೇ ಸಾಲಿಗೆ ಮುಂದುವರೆಸಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿರುವಂತೆ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕ ನಿಗದಿಪಡಿಸಿ ಆದೇಶಿಸಿದೆ.

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗದಿಪಡಿಸಿದ ಗರಿಷ್ಟ ವಾರ್ಷಿಕ ಶುಲ್ಕದ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು NCISM ಹಾಗೂ NCH ಹೊರಡಿಸಿರುವ ಮಾರ್ಗಸೂಚಿ ಹಾಗೂ ವೇಳಾಪಟ್ಟಿಗಳನುಸಾರ ಕೌನ್ಸಿಲಿಂಗ್ ನಡೆಸುವುದು.

ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕೋರ್ಸುಗಳಿಗೆ ಸಂಬಂಧಿಸಿದಂತೆ NRI / ಆಡಳಿತ ಮಂಡಳಿ ಕೋಟಾ ಸೀಟುಗಳನ್ನು NRI ಅಭ್ಯರ್ಥಿಗಳಿಗೆ 02 (ಎರಡು) ಸುತ್ತಿನ ಕೌನ್ಸಿಲಿಂಗ್ ನಡೆಸಿದ ಬಳಿಕ, ಉಳಿಕೆ ಸೀಟುಗಳನ್ನು ಅದೇ NRI ಶುಲ್ಕದಲ್ಲೇ ಆಡಳಿತ ಮಂಡಳಿ ಕೋಟಾದಡಿಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆ ಮಾಡತಕ್ಕದ್ದು.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳ ಪದವಿ ಕೋರ್ಸ್ 60% ಮತ್ತು ಸ್ನಾತಕೋತ್ತರ ಕೋರ್ಸ್ 75% NRI ಮತ್ತು ಆಡಳಿತ ಮಂಡಳಿ ಕೋಟಾ ಸೀಟುಗಳನ್ನು ಆಡಳಿತ ಮಂಡಳಿಗಳೇ ಭರ್ತಿ ಮಾಡಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾ.ವೈ.ಪ. ಮತ್ತು ಸಮನ್ವಯ).

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ/ಇ & ಆರ್ ಎಸ್ ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 5398, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ 5398, ಬೆಂಗಳೂರು-01.

...3

3. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು.
4. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು,
6. ಸಂಬಂಧಿಸಿದ ಮಹಾವಿದ್ಯಾಲಯಗಳಿಗೆ (ಆಯುಕ್ತರು, ಆಯುಷ್ ಇಲಾಖೆ ಇವರ ಮುಖಾಂತರ).
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿಗಳನ್ನು ಮಾಹಿತಿಗಾಗಿ:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತಸಹಾಯಕರು, ವಿಕಾಸಸೌಧ, ಬೆಂಗಳೂರು.

ಅನುಬಂಧ- 1

I. 2026-27ನೇ ಶೈಕ್ಷಣಿಕ ಸಾಲಿಗೆ **ಸರ್ಕಾರಿ** ಆಯುರ್ವೇದ / ಹೋಮಿಯೋಪತಿ, ಯುನಾನಿ ಮತ್ತು ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳ ಸೀಟು ಹಂಚಿಕೆ, ಅನುಪಾತ ಮತ್ತು ವಾರ್ಷಿಕ ಶುಲ್ಕದ ವಿವರ:

i. **ಬಿ.ಎನ್.ವೈ.ಎಸ್. ಪದವಿ ಕೋರ್ಸ್‌ಗಳಿಗೆ:**

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ರಾಜ್ಯ ಸರ್ಕಾರದ ಸೀಟುಗಳು	ಶೇ.100	₹30,335/-

ii. **ಬಿ.ಎ.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:**

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ಭಾರತ ಸರ್ಕಾರದ ಸೀಟುಗಳು	ಶೇ.15	₹30,335/-
02	ರಾಜ್ಯ ಸರ್ಕಾರದ ಸೀಟುಗಳು	ಶೇ.85	₹30,335/-

iii. **ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:**

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ಭಾರತ ಸರ್ಕಾರದ ಸೀಟುಗಳು	ಶೇ. 15	₹30,335/-
02	ರಾಜ್ಯ ಸರ್ಕಾರದ ಸೀಟುಗಳು	ಶೇ.85	₹30,335/-

iv. **ಬಿ.ಯು.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:**

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ಭಾರತ ಸರ್ಕಾರದ ಸೀಟುಗಳು	ಶೇ. 15	₹30,335/-
02	ರಾಜ್ಯ ಸರ್ಕಾರದ ಸೀಟುಗಳು	ಶೇ.85	₹30,335/-

II. 2026-27ನೇ ಶೈಕ್ಷಣಿಕ ಸಾಲಿಗೆ **ಅನುದಾನಿತ** ಆಯುರ್ವೇದ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ:

ಬಿ.ಎ.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:

ಕ್ರ.ಸಂ	ಸೀಟುಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ಭಾರತ ಸರ್ಕಾರದ ಸೀಟುಗಳು	ಶೇ.15	₹60,000/-
02	ರಾಜ್ಯ ಸರ್ಕಾರದ ಸೀಟುಗಳು	ಶೇ.65	₹60,000/-
03	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹5,00,000/-

ಅನುಬಂಧ – 2

2026-27 ನೇ ಶೈಕ್ಷಣಿಕ ಸಾಲಿಗೆ **ಸ್ನಾತಕೋತ್ತರ ಕೋರ್ಸ್‌ಗಳ** ಸೀಟು ಹಂಚಿಕೆ, ಅನುಪಾತ ಮತ್ತು ವಾರ್ಷಿಕ ಶುಲ್ಕದ ವಿವರ

ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಕೋರ್ಸ್‌ಗಳಿಗೆ:

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ಭಾರತ ಸರ್ಕಾರದ ಸೀಟುಗಳು	ಶೇ.15	₹61,471/-
02	ರಾಜ್ಯ ಸರ್ಕಾರದ ಸೀಟುಗಳು	ಶೇ.85	₹61,471/-

ಆ) ಅನುದಾನ ರಹಿತ ಖಾಸಗಿ ಮಹಾವಿದ್ಯಾಲಯಗಳಲ್ಲಿ

i. ಸ್ನಾತಕೋತ್ತರ **ಆಯುರ್ವೇದ** ಕೋರ್ಸ್‌ಗಳಿಗೆ:

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕಶುಲ್ಕ (ಗರಿಷ್ಟ ಮೊತ್ತ)
01	**ಭಾರತ ಸರ್ಕಾರದ ಸೀಟುಗಳು**	**ಶೇ.15**	**₹4,50,000/-**
02	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹1,25,000/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹5,00,000/-
04	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹ 7,00,000/-

ii. ಸ್ನಾತಕೋತ್ತರ **ಹೋಮಿಯೋಪತಿ** ಕೋರ್ಸ್‌ಗಳಿಗೆ:

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	**ಭಾರತ ಸರ್ಕಾರದ ಸೀಟುಗಳು**	**ಶೇ.15**	**₹3,00,000/-**
02	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹1,25,000/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹2,75,000/-
04	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹2,75,000/-

iii. ಸ್ನಾತಕೋತ್ತರ **ಯುನಾನಿ** ಕೋರ್ಸ್‌ಗಳಿಗೆ:

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	**ಭಾರತ ಸರ್ಕಾರದ ಸೀಟುಗಳು**	**ಶೇ.15**	**₹4,17,500/-**
02	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹1,00,000/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹3,67,500/-
04	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹3,67,500/-

iv. ಸ್ನಾತಕೋತ್ತರ **ಪ್ರಕೃತಿ ಚಿಕಿತ್ಸೆ ಮತ್ತು ಯೋಗ** ಕೋರ್ಸ್‌ಗಳಿಗೆ:

ಕ್ರ.ಸಂ	ಸೀಟುಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟಮೊತ್ತ)
01	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹1,00,000/-
02	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.55	₹3,67,500/-
03	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹14,00,000/-

ಸಂಖ್ಯೆ ಆಕುಕ 288 ಪಿಐಎಂ 2026.

III. 2026-27 ನೇ ಶೈಕ್ಷಣಿಕ ಸಾಲಿಗೆ **ಅನುದಾನ ರಹಿತ** ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಮಹಾವಿದ್ಯಾಲಯಗಳಿಗೆ ಸಂಬಂಧಿಸಿದಂತೆ:

i. <u>ಬಿ.ಎ.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:</u>

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	**ಭಾರತ ಸರ್ಕಾರದ ಸೀಟುಗಳು**	**ಶೇ.15**	**₹3,00,000/-**
02	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹75,000/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹4,00,000/-
04	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹6,00,000/-

ii. <u>ಬಿ.ಹೆಚ್.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:</u>

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	**ಭಾರತ ಸರ್ಕಾರದ ಸೀಟುಗಳು**	**ಶೇ.15**	**₹2,75,000/-**
02	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹75,000/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹2,50,000/-
04	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹2,50,000/-

iii. <u>ಬಿ.ಯು.ಎಂ.ಎಸ್. ಪದವಿ ಕೋರ್ಸ್‌ಗಳಿಗೆ:</u>

ಕ್ರ.ಸಂ	ಸೀಟುಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	**ಭಾರತ ಸರ್ಕಾರದ ಸೀಟುಗಳು**	**ಶೇ.15**	**₹2,50,000/-**
02	ರಾಜ್ಯ ಸರ್ಕಾರದ ಸೀಟುಗಳು	ಶೇ.25	₹75,000/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹2,50,000/-
04	NRI/ ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹2,50,000/-

iv. <u>ಬಿ.ಎನ್.ವೈ.ಎಸ್. ಪದವಿ ಕೋರ್ಸ್‌ಗಳಿಗೆ:</u>

ಕ್ರ.ಸಂ	ಸೀಟು ಹಂಚಿಕೆ	ಅನುಪಾತ	ವಾರ್ಷಿಕ ಶುಲ್ಕ (ಗರಿಷ್ಟ ಮೊತ್ತ)
01	ರಾಜ್ಯ ಸರ್ಕಾರದ ಸೀಟುಗಳು	ಶೇ.20	₹60,000/-
02	ಕೆ.ಇ.ಎ. ಭರ್ತಿ ಮಾಡುವ ಆಡಳಿತ ಮಂಡಳಿ ಸೀಟುಗಳು	ಶೇ.20	₹1,83,750/-
03	ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.40	₹1,83,750/-
04	NRI / ಆಡಳಿತ ಮಂಡಳಿ ಕೋಟಾ ಸೀಟುಗಳು	ಶೇ.20	₹7,00,000/-